ಮನೆಗಳ ಊರು. ಈ ಊರ ಜನ ನಮ್ಮೂರು ಇವತ್ತಲ್ಲ ನಾಳೆ ತಾಲ್ಲೂಕು ಆಗುತ್ತೆ ಅಂತ ನಂಬಿದ್ದರು. ಹೊಸಳ್ಳಿ ತಾಲ್ಲೂಕಾದರೆ ಊರ ಜಮೀನಿಗೆ ಬಂಗಾರದ ಬೆಲೆ ಬರುತ್ತೆ. ಎಂಥಾ ಕೆಟ್ಟ ಪರಿಸ್ಥಿತಿ ಬಂದರೂ ಯಾರೂ ಜಮೀನು ಮಾರಬೇಡಿ ಅಂತ ಅವರೆಲ್ಲ ಉಪದೇಶ ಮಾಡುತ್ತಿದ್ದರು. ಜಮೀನು ಮಾರಲು ಹೊರಟವರಿಗೆ ಏನಾದರೂ ಸಬೂಬು ಹೇಳಿ ಅವರ ಮನಸ್ಸು ಬದಲಾಯಿಸುತ್ತಿದ್ದರು!

ಈಗ ನಮ್ಮ ಇಂಗ್ಲಿಷ್ ಸ್ಕೂಲಿಗೆ ನಿಮ್ಮ ಜಮೀನು ಕೊಡ್ತೀರಾ ಅಂತ ಕೇಳಿಕೊಂಡು ಅಮೆರಿಕ ಡಾಕ್ಟರು ಬರಬಹುದು ಅಂತ ಕೆಲವರು ಮಾತಾಡಿಕೊಂಡರೆ, ಇನ್ನು ಕೆಲವರು ಗೋಮಾಳದ ಜಮೀನು ನುಂಗಲು ಯಾರೋ ಪ್ಲಾನು ಮಾಡುತ್ತಿರಬಹುದು ಅಂತ ಅನುಮಾನಿಸಿದರು.

ಹೊಸಳ್ಳಿಯಿಂದ ಸೂಗೂರಿಗೆ ಹೋಗುವ ಡಾಂಬರು ರಸ್ತೆ ಪಕ್ಕ ಏಳೆಂಟು ಎಕರೆಯಷ್ಟು ಗೋಮಾಳವಿದೆ. ಅದೊಂದೇ ಊರಲ್ಲಿರೋ ಸರ್ಕಾರಿ ಭೂಮಿ. ಅದಕ್ಕೆ ಗೋಮಾಳದ ಲಕ್ಷಣಗಳೇನೂ ಇಲ್ಲ. ಮಳೆಗಾಲದಲ್ಲಿ ಒಂದೆರಡು ತಿಂಗಳು ಊರ ದನ ಕರುಗಳು ಅಲ್ಲಿ ಮೇಯುವುದನ್ನು ಬಿಟ್ಟರೆ ಉಳಿದಂತೆ ಅದು ಕೆಮ್ಮಣ್ಣಿನ ಬಯಲು. ಈ ಗೋಮಾಳವನ್ನು ಲೀಸ್ ಮೇಲೆ ಕೊಟ್ಟರೆ ಅಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಿಸ್ತೀವಿ. ಹೊಸಳ್ಳಿ ಸೇರಿದಂತೆ ತಾಲ್ಲೂಕಿನ ಮೂವತ್ತು ಹಳ್ಳಿಗಳಲ್ಲದೆ, ಪಕ್ಕದ ಆಂಧ್ರದ ಮೂರು ತಾಲ್ಲೂಕುಗಳ ಟೌನುಗಳು ಮತ್ತು ಎಪ್ಪತ್ತೆಂಬತ್ತು ಹಳ್ಳಿಗಳ ಜನರಿಗೆ ಅನುಕೂಲ ಆಗುತ್ತೆ ಅಂತ ಸೂಗೂರು ಮಠದವರು ಡಿ.ಸಿ. ಸಾಹೇಬರಿಗೆ ಒಂದೂವರೆ ವರ್ಷದ ಹಿಂದೆ ಅರ್ಜಿ ಕೊಟ್ಟಿದ್ದರು.

'ಅದು ಗೋಮಾಳಕ್ಕೆ ಅಂತ ಮೈಸೂರು ಮಹಾರಾಜರು ಕೊಟ್ಟಿರುವ ಜಮೀನು. ಊರಲ್ಲಿ ನಾಲ್ಕು ಸಾವಿರ ದನ ಕರುಗಳಿವೆ. ಅವು ಮೇಯೋಕೆ ಅಂತ ಇರೋ ತಾವು ಅದೊಂದೇ. ಅದನ್ನು ಯಾರಿಗಾದರೂ ಕೊಟ್ಟರೆ ನಾವು ಸುಮ್ಮನಿರಲ್ಲ...' ಅಂತ ಊರವರು ಒಂದಾಗಿ ಬೆದರಿಕೆ ಹಾಕಿ ಡಿ.ಸಿ. ಸಾಹೇಬರಿಗೆ ಅರ್ಜಿ ಬರೆದು, ಕೆಲ ಮುಖಂಡರು ಖುದ್ದಾಗಿ ದುರ್ಗಕ್ಕೆ ಹೋಗಿ ಕೊಟ್ಟು ಬಂದಿದ್ದರು.

ಜಿಲ್ಲೆಯ ಎಂಟು ಎಂಎಲ್ಲೆಗಳು, ಒಬ್ಬ ಎಂಪಿ ಸೇರಿದಂತೆ ಎಲ್ಲ ಪಕ್ಷಗಳ ಮುಖಂಡರೂ ಮಠದ ಭಕ್ತರೇ. ಗೋಮಾಳವನ್ನು ಮಠಕ್ಕೆ ಕೊಡಬಹುದು ಅಂತ ಅವರೆಲ್ಲ ಸಿಎಂ ಸಾಹೇಬರಿಗೆ ಬಾಯಿ ಮಾತಲ್ಲಿ ಹೇಳಿದರೂ ಸಾಕು. ಸರ್ಕಾರ ಹಿಂದೆ ಮುಂದೆ ಯೋಚಿಸದೆ ಗೋಮಾಳವನ್ನು ಮಠಕ್ಕೆ ಮುಫತ್ತಾಗಿ ಕೊಟ್ಟುಬಿಡುತ್ತೆ ಅಂತ ಊರವರು ಮಾತಾಡಿಕೊಳ್ಳುತ್ತಿದ್ದರು.

'ಗೋಮಾಳ ಊರಿಗೆ ಉಳೀಬೇಕು ಅಂತಿದ್ದರೆ ಅದರಲ್ಲಿ ಸ್ವಲ್ಪ ಭಾಗವನ್ನು ನಮ್ಮೂರವರೇ ಯಾರಾದರೂ ಒತ್ತುವರಿ ಮಾಡಬೇಕು. ಆ ಒತ್ತುವರಿ ವಿರುದ್ಧ ನಾವೇ ಸಿವಿಲ್ ಕೋರ್ಟಿಗೆ ಹೋಗಬೇಕು. ತೀರ್ಪು ಏನೇ ಬರಲಿ. ಆಮೇಲೆ ಜಿಲ್ಲಾ ಕೋರ್ಟು, ಹೈಕೋರ್ಟು ಅಂತ ಇದ್ದೇ ಇರುತ್ತೆ. ತಕರಾರಿನಲ್ಲಿರೊ ಭೂಮಿಯನ್ನ ಸರ್ಕಾರ ಯಾರಿಗೂ ಕೊಡಕೆ ಬರಲ್ಲ...' ಅಂತ ಅಲ್ಪ ಸ್ವಲ್ಪ ಕಾನೂನು ಗೊತ್ತಿರುವ ಮಾಜಿ ಶಾನುಭೋಗರ ಮೊಮ್ಮಗ ವಿಶ್ವನಾಥ ಹೇಳಿದ್ದ.

'ಇಸ್ವಣ್ಣ ಹೇಳದು ಸರಿಯಾಗೈತೆ. ಕೊಕ್ಕೆ ಹಾಕಬೇಕು ಅಂದ್ರೆ ಅವನೇಳಿದಂಗೇ ಮಾಡಬೇಕು. ನಮ್ಮೂರವರೇ ಒತ್ತುವರಿ ಮಾಡಿ, ನಾವೇ ಕೋರ್ಟಿಗೆ ಹೋಗುವ ಪ್ಲಾನು ಸರಿಯಾಗೇ ಐತೆ...' ಅಂತ ಕೆಲವರು ಒಪ್ಪಿದ್ದರು. ಆದರೆ, ಒತ್ತುವರಿ ಯಾರಿಂದ ಮಾಡಿಸೋದು ಅನ್ನೋದು ಇತ್ಯರ್ಥ ಆಗಲಿಲ್ಲ. ನಾನೇ ಒತ್ತುವರಿ ಮಾಡ್ತೀನಿ ಅಂತ ವಿಶ್ವನಾಥ ಹೇಳಿದ್ದ. ಅವನಿಂದ ಒತ್ತುವರಿ ಮಾಡಿಸಲು ಊರವರಿಗೆ ಇಷ್ಟವಿರಲಿಲ್ಲ. ಅಷ್ಟರಲ್ಲಿ ಕೊರೊನಾ ಕಾಟ ಶುರುವಾದ್ದರಿಂದ ಒತ್ತುವರಿ ವಿಷಯವನ್ನು ಊರು ಮರೆತಿತ್ತು.

★★★